ಅಹಿಂಸೆ ಹಾಗೂ ಪಂಚಾಯಿತಿಗಳ ಮಾತಾಡುತ್ತಾ ಯುದ್ಧ ಹತ್ತಿರವಾಗುವಂತೆ ಮಾಡುತ್ತಿದ್ದಾರೆ. ನೀವು ಕಚ್ ಪ್ರದೇಶವನ್ನು ದಾನವಾಗಿ ಕೊಟ್ಟರೂ ಯುದ್ಧ ಮುಗಿಯುವುದಿಲ್ಲ; ಮತ್ತೆ ಕಾಶ್ಮೀರದ ಪ್ರಶ್ನೆ ಶುರುವಾಗುತ್ತದೆ... ನೀವೆಷ್ಟೇ ಉದಾರ ಪ್ರಯತ್ನ ಮಾಡಿದರೂ ಮೂರು ತಿಂಗಳು ಮೀರಿ ಈ ಶಾಂತಿ ಉಳಿಯುವುದಿಲ್ಲ.'

1962ರ ಚೀನಾ ಆಕ್ರಮಣದ ಕಹಿ ಅನುಭವವನ್ನು ಹಾದುಹೋಗಿದ್ದ ದೇಶ ಈ ಘಟ್ಟದಲ್ಲಿ ಒಟ್ಟಾಗಿ ಎದ್ದು ನಿಂತಿತು. ಲಾಲ್‌ಬಹದ್ದೂರ್ ಶಾಸ್ತ್ರಿ ಗಟ್ಟಿ ನಿಲುವು ತಳೆದರು.

ಈ ಘಟ್ಟದ ವಿವರಗಳನ್ನು ಬಿಪಿನ್‌ಚಂದ್ರ ಮತ್ತು ಸಹ ಲೇಖಕರು ಕೊಡುತ್ತಾರೆ:

'1 ಸೆಪ್ಟೆಂಬರ್ 1965. ಪಾಕಿಸ್ತಾನ ಜಮ್ಮು–ಕಾಶ್ಮೀರದ ನೈರುತ್ಯ ಭಾಗದ ಚಂಬಾ ವಲಯದ ಮೇಲೆ ದಾಳಿ ಮಾಡಿತು. ತಕ್ಷಣ ಪ್ರಧಾನಮಂತ್ರಿಗಳು ಭಾರತೀಯ ಸೇನೆಗೆ ಆದೇಶ ಕೊಟ್ಟರು. ಕಾಶ್ಮೀರವನ್ನು ರಕ್ಷಿಸುವುದಷ್ಟೇ ಅಲ್ಲ, ಗಡಿ ದಾಟಿ ಪಾಕಿಸ್ತಾನದ ಲಾಹೋರ್ ಮತ್ತು ಸಿಯಾಲ್ ಕೋಟ್ ಕಡೆಗೆ ಮುನ್ನಡೆಯಬೇಕೆಂದು ಭಾರತೀಯ ಸೇನೆಗೆ ಆದೇಶ ಹೊರಟಿತು.

'ಭಾರತೀಯ ಸೇನೆ ಲಾಹೋರಿನತ್ತ ನಡೆದಾಗ ಲೋಹಿಯಾಗೆ ತಮ್ಮ ನಿಲುವಿನ ಬಗ್ಗೆ ಇನ್ನಷ್ಟು ವಿಶ್ವಾಸ ಮೂಡಿತು' ಎಂದು ಇಂದುಮತಿ ಕೇಳ್ಕರ್ ಬರೆಯುತ್ತಾರೆ.

ಅನಂತರದ ಬೆಳವಣಿಗೆಗಳನ್ನು ಬಿಪಿನ್‌ಚಂದ್ರ ಮತ್ತು ಸಹ ಲೇಖಕರು ದಾಖಲಿಸುತ್ತಾರೆ:

'ವಿಶ್ವಸಂಸ್ಥೆಯ ಭದ್ರತಾ ಸಭೆಯ ಒತ್ತಡದಿಂದಾಗಿ ಎರಡೂ ದೇಶಗಳು ಕದನವಿರಾಮಕ್ಕೆ ಒಪ್ಪಿದವು. ಕಾಶ್ಮೀರಕ್ಕೆ ನುಸುಳಿ ಭಾರತದ ಮೇಲೆ ಆಕ್ರಮಣ ಮಾಡುವ ಪಾಕಿಸ್ತಾನದ ಪ್ರಯತ್ನಕ್ಕೆ ಸೋಲಾಯಿತು. ಮೂರು ವಾರದ ಸೆಣಸಾಟ ಎರಡೂ ದೇಶಗಳ ಆರ್ಥಿಕತೆಗೆ ಪೆಟ್ಟು ಕೊಟ್ಟಿತ್ತು.

'ಆದರೆ ಭಾರತದ ಜಾತ್ಯತೀತತೆ ತನ್ನ ಶಕ್ತಿಸಾಮರ್ಥ್ಯ ಏನೆಂಬುದನ್ನು ತೋರಿಸಿತ್ತು. ಭಾರತ ರಾಜಕೀಯವಾಗಿ ಗಟ್ಟಿಯಾಗತೊಡಗಿತ್ತು. ಪಾಕಿಸ್ತಾನದ ನುಸುಳುಕೋರರಿಗೆ ಕಾಶ್ಮೀರ ಜನತೆಯ ಬೆಂಬಲ ಸಿಗಲಿಲ್ಲ. ಸೇನೆಯಲ್ಲಿ ಹಿಂದು, ಸಿಖ್, ಕ್ರಿಶ್ಚಿಯನ್ ಸಂಗಾತಿಗಳಿಗೆ ಹೆಗಲೆಣೆಯಾಗಿ ಮುಸ್ಲಿಂ ಸೈನಿಕರು ಕಾದಿದರು. ಯುದ್ಧ ಕಾಲದಲ್ಲಿ ದೇಶದಲ್ಲಿ ಯಾವ ಕೋಮು ಸಮಸ್ಯೆಯೂ ಇರಲಿಲ್ಲ

'ಯುದ್ಧದ ನಂತರ ಲಾಲ್‌ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಹೀರೋ ಆದರು. 4 ಜನವರಿ 1966ರಂದು ರಷ್ಯಾದ ಮಧ್ಯಸ್ಥಿಕೆಯ ಫಲವಾಗಿ ಪಾಕಿಸ್ತಾನದ ಜನರಲ್ ಅಯೂಬ್ ಖಾನ್ ಹಾಗೂ ಶಾಸ್ತ್ರಿ ತಾಷ್ಕೆಂಟ್ ಘೋಷಣೆಗೆ ಸಹಿ ಹಾಕಿದರು... ಅಷ್ಟೊತ್ತಿಗಾಗಲೇ ಹೃದಯಸಂಬಂಧಿ ಕಾಯಿಲೆಯ ಇತಿಹಾಸವಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ 10 ಜನವರಿ 1966ರಂದು ತಾಷ್ಕೆಂಟ್‌ನಲ್ಲಿ ಹೃದಯಾಘಾತದಿಂದ ನಿಧನರಾದರು.'

ಶಾಸ್ತ್ರಿಯವರ ಹಠಾತ್ ನಿಧನ ಕುರಿತು ತನಿಖೆ ನಡೆಯಬೇಕೆಂದು ಲೋಹಿಯಾ ಲೋಕಸಭೆಯಲ್ಲಿ ಒತ್ತಾಯಿಸಿದರು. ಈ ಚರ್ಚೆಗೆ ಸ್ಪೀಕರ್ ಅವಕಾಶ ಕೊಡಲಿಲ್ಲ. ಆಗ ಲೋಹಿಯಾ ಹೇಳಿದರು: 'ಈ ದೇಶದ ಬಡ ಜನರು, ನಿರ್ಗತಿಕ ಜನರು ಪ್ರಾಣಿಗಳಂತೆ ಸಾಯುತ್ತಾರೆ; ಆದರೆ ಈ ದೇಶದ ಪ್ರಧಾನಮಂತ್ರಿ ಕೂಡ ಅಂಥದೇ ಸಾವಿನಲ್ಲಿ ಕೊನೆಯಾಗುತ್ತಾರೆ ಎಂದರೆ ಇನ್ನಷ್ಟು ದುಃಖವಾಗುತ್ತದೆ.'

## ಕಳೆದ ಸಂಚಿಕೆಯಲ್ಲಿ



ಸಾಮಾನ್ಯ ಜನರ ಸಂಕಷ್ಟಗಳ ಕುರಿತು ಲೋಕಸಭೆಯಲ್ಲಿ ಮಾತನಾಡತೊಡಗಿದ ಲೋಹಿಯಾ, 'ಸೆಂಟ್ರಲ್ ವಿಜಿಲೆನ್ಸ್'ನಡಿ ಪ್ರಧಾನಮಂತ್ರಿಯಿಂದ ಹಿಡಿದು ಎಲ್ಲರೂ ಬರಬೇಕೆಂದು ಪ್ರತಿಪಾದಿಸಿದರು. ದೇಶದಲ್ಲಿನ ಭ್ರಷ್ಟಾಚಾರದ ಲಜ್ಜೆಗೇಡಿತನವನ್ನು ಬಯಲು ಮಾಡಿದರು. ಸೈನಿಕರ ತ್ಯಾಗದ ಕುರಿತ ತೋರುಗಾಣಿಕೆಯ ಸಂಸ್ಕೃತಿಯನ್ನು ಟೀಕಿಸಿದರು. ಜನಸಮುದಾಯಗಳ ಹಿತ–ಸೌಹಾರ್ದಕ್ಕೆ ಸಂಬಂಧಿಸಿದ ಲೋಹಿಯಾ ವಿಚಾರಗಳು ಸಮಾಜದ ಆವರೆಗಿನ ಯೋಚನಾಕ್ರಮವನ್ನೇ ಬದಲಿಸುವಷ್ಟು ಸಮರ್ಥವಾಗಿದ್ದವು. 1964ರಲ್ಲಿ ಲೋಹಿಯಾ ವಿವಿಧ ದೇಶಗಳ ಪ್ರವಾಸ ಕೈಗೊಂಡರು. ಅಮೆರಿಕ ಭೇಟಿ ಸಂದರ್ಭದಲ್ಲಿ ವರ್ಣಭೇದ ಕಾನೂನಿನ ಫಲವಾದ ಅಸ್ಪೃಶ್ಯತೆಯನ್ನು ಅವರು ಅನುಭವಿಸಬೇಕಾಗಿ ಬಂತು. ಪ್ರವೇಶ ನಿರಾಕರಿಸಿದ ಕೆಫೆಟೇರಿಯಾಕ್ಕೆ ಹೋಗಿ ಅಲ್ಲಿನ ನಿಯಮ ಉಲ್ಲಂಘಿಸಿ ಬಂಧನಕ್ಕೊಳಗಾದರು. ಪೊಲೀಸರು ಅವರನ್ನು ಬಂಧಿಸಿ ಬಿಡುಗಡೆ ಮಾಡಿದರು. ತನ್ನನ್ನು ನಡೆಸಿಕೊಂಡ ರೀತಿ 'ಅಮೆರಿಕದ ಸಂವಿಧಾನದ ಮೇಲೆ ನಡೆದ ಹಲ್ಲೆ' ಎಂದು ಲೋಹಿಯಾ ವ್ಯಾಖ್ಯಾನಿಸಿದರು. ಲೋಹಿಯಾ ಭಾರತಕ್ಕೆ ಹಿಂತಿರುಗುವ ವೇಳೆಗೆ ಲಾಲ್ ಬಹದ್ದೂರ್ ಶಾಸ್ತ್ರಿ ಪ್ರಧಾನಿಯಾಗಿದ್ದರು.

* * *

1957ರಲ್ಲೇ 'ಮುಂದಿನ ಪ್ರಧಾನಿ ಇಂದಿರಾ ಗಾಂಧಿ' ಎಂದು ಭವಿಷ್ಯ ನುಡಿದಿದ್ದ ಲೋಹಿಯಾ, ಇಂದಿರಾ ಗಾಂಧಿಯವರ ಆಯ್ಕೆಯಾದಾಗ ಹೇಳಿದರು: 'ದಿನ ಬೆಳಗಾಗೆದ್ದು ಪೇಪರಿನಲ್ಲಿ ಒಂದು ಸುಂದರ ಮುಖವನ್ನು ನೋಡಬಹುದು.' 24 ಜನವರಿ 1966ರಂದು ಇಂದಿರಾಗಾಂಧಿ ಭಾರತದ ಪ್ರಧಾನಮಂತ್ರಿಯಾದರು.

ಆದರೆ ಲೋಹಿಯಾರ ಲೋಕಸಭಾ ಭಾಷಣಗಳಲ್ಲಿ ದೇಶದ ಮೊಟ್ಟಮೊದಲ ಮಹಿಳಾ ಪ್ರಧಾನಿಗೆ ರಿಯಾಯಿತಿಗಳೇನೂ ಇರಲಿಲ್ಲ. ಅವರು ಇಂದಿರಾಗಾಂಧಿಯವರನ್ನು ಕೊಂಚ ಕ್ರೂರವಾಗಿಯೇ ಗೇಲಿ ಮಾಡಿದರೂ, ಅಲ್ಲಿ ವೈಯಕ್ತಿಕ ದ್ವೇಷವೇನೂ ಇರಲಿಲ್ಲ. ಆಗ ಲೋಹಿಯಾ ಜೊತೆಗಿದ್ದ ಕರ್ನಾಟಕದ ಕೋಣೆ ಸದಾಶಿವ ಕಾರಂತ 1966ರಲ್ಲಿ ನಡೆದ ಮಾತುಕತೆಯೊಂದನ್ನು ನೆನೆಯುತ್ತಾರೆ:

'ಲೋಹಿಯಾ ಬಗ್ಗೆ ಹಗೆತನ ಸಾಧಿಸುತ್ತಿದ್ದ ಇಂಗ್ಲಿಷ್ ಪತ್ರಿಕೆಗಳು ಹಾಗೂ ವ್ಯವಸ್ಥೆ ಎರಡೂ ಜೊತೆಗೂಡಿ ದಿವಂಗತ ಪ್ರಧಾನಿ ನೆಹರೂ ಹಾಗೂ ಅವರ ಮನೆತನದ ವಿರುದ್ಧ ಲೋಹಿಯಾ ವಿಷ ಕಾರುತ್ತಾರೆ ಎಂದು ಹಬ್ಬಿಸಿದ್ದರು. ಕಾಗದ ಪತ್ರ ಬರೆಯುವುದರಲ್ಲಿ ನಾನು ಲೋಹಿಯಾಗೆ ಸಹಾಯ ಮಾಡುತ್ತಿದ್ದ ಸಂದರ್ಭದಲ್ಲಿ ಒಮ್ಮೆ ನನಗೆ ಲೋಹಿಯಾ ಒಂದು ಪತ್ರವನ್ನು ಕೊಟ್ಟರು. ಆ ಪತ್ರ ಬರೆದ ವ್ಯಕ್ತಿ ಘಟನೆಯೊಂದನ್ನು ವಿಸ್ತಾರವಾಗಿ ತಿಳಿಸುತ್ತಾ, 'ಶ್ರೀಮತಿ ಇಂದಿರಾಗಾಂಧಿಯವರ ಪುತ್ರನೊಬ್ಬ ಕಾರು ಕಳುವಿನ ಮೊಕದ್ದಮೆಯೊಂದರಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ; ಡಾ. ಲೋಹಿಯಾ ಇದರ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪ ಮಾಡಬೇಕು' ಎಂದು ಕೇಳಿಕೊಂಡಿದ್ದ.

'ಆಗ ಲೋಹಿಯಾ ಹೇಳಿದರು: 'ಅಧಿಕಾರದಲ್ಲಿರುವವರನ್ನು ಹಿಂಸಿಸುವುದು ನನಗೆ ಇಷ್ಟವಾದ ಕೆಲಸವೆಂದು ಕೆಲವರು ತಿಳಿದಿದ್ದಾರೆ. ಇಲ್ಲ, ಅಂಥ ಕಾರ್ಯ ಮಾಡಲು ನನಗಿಷ್ಟವಿಲ್ಲ. ಕಾರು ಕಳುವಿನ ಸುದ್ದಿ ನಿಜವಾಗಿದ್ದರೂ, ಸಹ ನಾನು ಈ ವಿಷಯವನ್ನು ಕೈಗೆತ್ತಿಕೊಳ್ಳಲಾರೆ. ಎಲ್ಲ ಮಕ್ಕಳೂ ಕೆಲವು ವೇಳೆ ತಪ್ಪು ಮಾಡುತ್ತಾರೆ. ಇಂದಿರಾ ಅವರ ಮಗನೂ ಅಮಾಯಕವಾಗಿ ಏನೋ ತುಂಟತನ ಮಾಡಿರಬಹುದು. ನಾನು ಪಂಡಿತ್ ನೆಹರೂರನ್ನು ಟೀಕೆ ಮಾಡಿರುವುದು ಬೇರೆ ಉದ್ದೇಶಕ್ಕಾಗಿ. ಜೊತೆಗೆ, ನೆಹರು ಬೇರೆ ಸ್ತರದಲ್ಲೇ ಇದ್ದಂಥ ವ್ಯಕ್ತಿ.'

ಆದರೆ ದೇಶಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಲೋಹಿಯಾ ನಿಲುವಿನಲ್ಲಿ ರಾಜಿಯಿರಲಿಲ್ಲ. ಅವರ ಕಟು ಮಾತುಗಳಿಗೆ ಆಡಳಿತ ಪಕ್ಷದ ವಿರೋಧ ಹೆಚ್ಚತೊಡಗಿತ್ತು. ಕೆಲವರು ಲೋಹಿಯಾರ ಬಾಯಿ ಬಡಿಯಲು ಸಿದ್ಧವಾಗಿರುತ್ತಿದ್ದರು.